ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಾರ್ವಜನಿಕ ಲೆಕ್ಕಪತ್ರ ಸಮಿತಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 10/7/20

# ಪೆನ್ ಡ್ರೈವ್ ನನ್ನಲ್ಲಿ ಇಲ್ಲ

## ರಾಜಕೀಯ ಲಾಭಕ್ಕೆ ನನ್ನ ಹೆಸರು ತರಬೇಡಿ ಎಂದ ನಿರಾಣಿ

■ **ವಿಕ ಸುದ್ದಿಲೋಕ** ಬೆಂಗಳೂರು

ವೈದ್ಯಕೀಯ ಉಪಕರಣಗಳ ಖರೀದಿಯಲ್ಲಿ ನಡೆದಿದೆಯೆನ್ನಲಾದ ಅವ್ಯವಹಾರ ಸಂಬಂಧ ಆಡಳಿತ ಹಾಗೂ ಪ್ರತಿಪಕ್ಷದ ನಡುವೆ ನಡೆಯುತ್ತಿರುವ ವಾಕ್ಸಮರ ಗುರುವಾರವೂ ಮುಂದುವರಿದಿದೆ.



''ಅವ್ಯವಹಾರದ ಸಂಬಂಧ ನನ್ನನ್ನು ದಾಖಲೆ ಕೇಳುವ ಬದಲು ತಮ್ಮ ಪಕ್ಷದ ಮಾಜಿ ಸಚಿವ ಮುರುಗೇಶ್ ನಿರಾಣಿ ಅವರ ಪೆನ್‌ಡ್ರೈವ್‌ನಲ್ಲಿದೆ, ಅವರಿಂದಲೇ ತೆಗೆದುಕೊಳ್ಳಿ,'' ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಟ್ವೀಟ್ ಮಾಡಿದ್ದಕ್ಕೆ ಪ್ರತಿಕ್ರಿಯೆ ನೀಡಿರುವ ಮುರುಗೇಶ್ ನಿರಾಣಿ, ''ರಾಜಕೀಯ ಲಾಭಕ್ಕೆ ನನ್ನ ಹೆಸರು ತಳಕು ಹಾಕೋದು ಬೇಡ,'' ಎಂದು ಹೇಳಿದ್ದಾರೆ.

''ನನ್ನ ಬಳಿ ಆ ರೀತಿಯ ಪೆನ್ ಡ್ರೈವ್ ಇಲ್ಲ, ಅಪರಿಚಿತ ವ್ಯಕ್ತಿಯೊಬ್ಬರು ನನ್ನ ಬಳಿ ವಿಜಯಪುರ ಜಿಲ್ಲಾಸ್ಪತ್ರೆಯ ಅವ್ಯವಹಾರದ ಬಗ್ಗೆ125 ಪುಟಗಳ ದಾಖಲೆಯ ಪೆನ್ ಡ್ರೈವ್ ಇದೆ ಎಂದಿದ್ದರು. ಕೋವಿಡ್ 19 ಅವ್ಯವಹಾರದ ಕುರಿತು ಪಬ್ಲಿಕ್ ಅಕೌಂಟ್ ಕಮಿಟಿಯಲ್ಲಿ ಚರ್ಚೆಯಾಗುವ ಸಂದರ್ಭದಲ್ಲಿ ಈ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ ಅಷ್ಟೆ'' ಎಂದಿದ್ದಾರೆ.

**ಎಚ್ಕೆಪಿ ಟಾಂಗ್:** ಈ ಮಧ್ಯೆ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ಅಧ್ಯಕ್ಷರಾಗಿರುವ ಎಚ್.ಕೆ.ಪಾಟೀಲ್ ''ಸಭೆಯಲ್ಲಿ ಸದಸ್ಯರು ಏನು ಮಾತನಾಡಿದರು ಎಂಬುದನ್ನು ಸಮಿತಿ ಅಧ್ಯಕ್ಷನಾಗಿ ಹೇಳಬಾರದು. ಸಭೆಯ ನಡವಳಿಗಳನ್ನು ಮಾಹಿತಿ ಹಕ್ಕು ಕಾಯಿದೆ ಅನ್ವಯ ಪಡೆದುಕೊಳ್ಳಬಹುದಾಗಿದೆ,'' ಎಂದಿದ್ದಾರೆ.